ದ್ದೇನೆ. ತಾವು ದಯಮಾಡಿ ಸಹಕಾರ ನೀಡಿ.

ಶ್ರೀ ಎಂ. ಮಲ್ಲಿಕಾರ್ಜುನ್ ಖರ್ಗೆ:- ತಾವು ಆಮೇಲೆ ಅವಕಾಶ ಕೊಡುತ್ತೀರಿ ಎನ್ನುವುದಾದರೆ ನಾನು ಕುಳಿತುಕೊಳ್ಳುತ್ತೇನೆ.

ಉಪಾಧ್ಯಕ್ಷರು:- ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಲು ನಾನು 5-6 ಹೆಸರುಗಳ ಪಟ್ಟಿ ಮಾಡಿದ್ದೇನೆ. ಪ್ರತಿಯೊಬ್ಬರೂ ಕೂಡ ಕೇವಲ ಎರಡೆರಡು ನಿಮಿಷದಲ್ಲಿ ತಮ್ಮ ತಮ್ಮ ವಿಷಯಗಳನ್ನು ಪ್ರಸ್ತಾಪ ಮಾಡಿಬಿಡಿ.

ಶ್ರೀ ಎಂ. ಮಲ್ಲಿಕಾರ್ಜುನ್ ಖರ್ಗೆ:- ಈಗ ಅವರದು ಆದಮೇಲೆ ನನಗೆ ಅವಕಾಶ ಕೊಡುತ್ತೀರಾ?

ಉಪಾಧ್ಯಕ್ಷರು:- ಅವರದು ಮೊದಲು ಆಗಲಿ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಉಪಾಧ್ಯಕ್ಷರೇ ನನಗೇನೂ ಅಂತಹ ಆತುರ ಇಲ್ಲ. ತಾವು ನನಗೆ ಕೊನೆಯಲ್ಲಿ ಬೇಕಾದರೆ ವಿಷಯ ಪ್ರಸ್ತಾಪಿಸಲು ಅವಕಾಶ ಮಾಡಿಕೊಡಿ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಅಧ್ಯಕ್ಷರು ನನಗೆ ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಲು ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿದ್ದರು. ಆದುದರಿಂದ ತಾವು ದಯಮಾಡಿ ನನಗೆ ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು:- ತಾವು ದಯಮಾಡಿ ಕುಳಿತುಕೊಳ್ಳಬೇಕು. ಮಾನ್ಯ ಬಾಲಕೃಷ್ಣರವರು ಸಮಯ ಹಾಳು ಮಾಡದೇ ತಮ್ಮ ವಿಷಯವನ್ನು ಪ್ರಸ್ತಾಪಿಸಿ.

(ಈ) ಮಾಗಡಿ ತಾಲ್ಲೂಕಿನಲ್ಲಿ ಬಸ್ಸುಗಳ ಸಂಚಾರ ಸ್ಥಗಿತ.

+ ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ):- ಸನ್ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ನಾಲ್ಕು ದಿವಸಗಳಿಂದ ಬಸ್ಸುಗಳ ಸಂಚಾರ ಸ್ಥಗಿತಗೊಂಡಿದೆ. ಇದುವರೆವಿಗೂ ಮಂತ್ರಿಗಳಾಗಲಿ, ಅಧಿಕಾರಿಗಳಾಗಲಿ, ಆದರ ಬಗ್ಗೆ ಯಾವುದೇ ಒಂದು ಗಮನವನ್ನು ಹರಿಸಿಲ್ಲ. ನಾನು ಸೋಮವಾರ ಬೆಳಿಗ್ಗೆ, ಅಲ್ಲಿ ಎನ್.ಹೆಚ್. 48ರಲ್ಲಿ ರಸ್ತೆ ರೋಕೋ ಚಳುವಳಿಯನ್ನು ಮಾಡಿದಂತಹ ಸಂದರ್ಭದಲ್ಲಿ, ಡಿವೈ.ಎಸ್.ಪಿ. ಆ ಸ್ಥಳಕ್ಕೆ ಬಂದು, ಮಂತ್ರಿಗಳು ಮತ್ತು ನಾವು, ನೀವೆಲ್ಲರೂ ಸೇರಿ ಸಮಸ್ಯೆಯನ್ನು ಬಗೆ ಹರಿಸೋಣ ಎನ್ನತಕ್ಕಂತಹ ಉತ್ತರವನ್ನು ಅಲ್ಲಿ ಹೇಳಿ ನಮ್ಮನ್ನು ಇಲ್ಲಿಗೆ ಕರೆದುಕೊಂಡು ಬಂದಾಗಿನಿಂದ ಇದುವರೆವಿಗೂ ಯಾವುದೇ ಒಂದು ಪರಿಹಾರ ಆಗಿಲ್ಲ. ಕಾರಣ, ನನ್ನ ಕ್ಷೇತ್ರದಲ್ಲಿ ಖಾಸಗಿ ಬಸ್ಸಿನವರದೇ ಆಡಳಿತ ಆಗಿದೆ. ಅವರು ಏಕಾಏಕಿ ಶೇಕಡ 50ರಷ್ಟು ದರವನ್ನು ಹೆಚ್ಚಿಸಿದ್ದಾರೆ. ಆ ದೃಷ್ಟಿಯಲ್ಲಿ ಜನಗಳು ಅದರ ವಿರುದ್ಧ ತಿರುಗಿಬಿದ್ದು, ಈ ಖಾಸಗಿ ಬಸ್ಸುಗಳು ನಮಗೆ ಬೇಡ, ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು ನಮಗೆ ಬೇಕು ಎನ್ನತಕ್ಕಂತಹ ಮಾತನ್ನು ಅಲ್ಲಿನ ಜನಗಳು

ಹೇಳುತ್ತಿದ್ದಾರೆ, ಆದರೆ ಕೆ.ಎಸ್.ಆರ್.ಟಿ.ಸಿ. ಬಸ್ಸಿನವರು, ಗಲಾಟೆ ಮಾಡಿ ಖಾಸಗಿ ಬಸ್ಸುಗಳ ಸಂಚಾರ ಸ್ಥಗಿತಗೊಂಡಾಗ, ಮಂಗಳವಾರ ಎಂಟು ಬಸ್ಸುಗಳನ್ನು ಅಲ್ಲಿಗೆ ಕಳುಹಿಸಿದರು. ಆದರೆ ಬುಧವಾರದ ದಿವಸ ಆ ಎಂಟು ಬಸ್ಸುಗಳಲ್ಲಿ ಒಂದು ಬಸ್ಸುಗಳೂ ಇಲ್ಲ. ಕಾರಣ ಏನು ಎಂದು ನಮಗೆ ಗೊತ್ತಿಲ್ಲ. ನಾವು ಎಂ.ಡಿ.ಯವರಿಗಾಗಲಿ, ಅಧಿಕಾರಿಗಳಾಗಲಿ, ಫೋನ್ ಮಾಡಿ ಅವರನ್ನು ಕಾಂಟ್ಯಾಕ್ಟ್ ಮಾಡಿದರೆ, ನಿಮ್ಮದು ರಾಷ್ಟ್ರೀಕರಣ ಆಗಿಲ್ಲ, ಆ ಜಾಗಕ್ಕೆ ನಾವು ಬಸ್ಸನ್ನು ಬಿಡುವುದಿಲ್ಲ ಎನ್ನತಕ್ಕಂತಹ ಮಾತು ಅಧಿಕಾರಿಗಳಿಂದ ಬಂತು. ಈ ಕಡೆ ಪ್ರೈವೇಟ್ ಬಸ್ಸುಗಳವರೂ ಓಡಿಸುವುದಿಲ್ಲ, ಆ ಕಡೆ ಕೆ.ಎಸ್.ಆರ್.ಟಿ.ಸಿ. ಯವರೂ ಕೂಡ ತಮ್ಮ ಬಸ್ಸುಗಳನ್ನು ಓಡಿಸುವುದಿಲ್ಲ. ಹೀಗಾದರೆ ನಮ್ಮ ಸ್ಥಿತಿ ಏನಾಗಬೇಕು? ದಯಮಾಡಿ ಮಾನ್ಯ ಮಂತ್ರಿಗಳು ಸದನದಲ್ಲಿ ಈಗಾಗಲೇ, ಮಾತುಕತೆ ಬೇಕಾದರೆ ಯಾವಾಗಲಾದರೂ ಮಾಡಿಕೊಳ್ಳೋಣ, ಹಳೆಯ ದರದಲ್ಲಿ ಖಾಸಗಿಯವರು ಈಗಿಂದೀಗಲೇ ಬಸ್ಸುಗಳನ್ನು ಓಡಿಸಬೇಕು, ಇಲ್ಲವೆಂದರೆ ಅಲ್ಲಿಗೆ ತಕ್ಷಣವೇ ಕೆ.ಎಸ್.ಆರ್.ಟಿ.ಸಿ. ವತಿಯಿಂದ ಬಸ್ಸುಗಳನ್ನು ಓಡಿಸತಕ್ಕಂತಹ ವ್ಯವಸ್ಥೆಯನ್ನು ಮಾಡಬೇಕು ಅಂತ ಹೇಳಿ ನಾನು ಇದರ ಬಗ್ಗೆ ಮಾನ್ಯ ಮಂತ್ರಿಗಳಿಂದ ಉತ್ತರವನ್ನು ಬಯಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಉಪಾಧ್ಯಕ್ಷರೇ, ತಾವು ಅಲ್ಲಿನ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕು. ಹೀಗಾದರೆ ಚುನಾಯಿತ ಪ್ರತಿನಿಧಿಗಳು ಹೇಗೆ ಕೆಲಸ ಮಾಡುವುದು? ಮಾಗಡಿ–ಬೆಂಗಳೂರಿಗೆ ಪ್ರೈವೇಟ್ ಬಸ್ಸಿಗೆ ಮೊದಲು 7.50 ರೂ. ತೆಗೆದು ಕೊಳ್ಳುತ್ತಿದ್ದರು. ಇವತ್ತು ಅದನ್ನು 11 ರೂ.ಗೆ ಏರಿಸಿದ್ದಾರೆ. ಜನಗಳು ಅದಕ್ಕೆ ಪ್ರತಿಭಟನೆ ಮಾಡುತ್ತಿದ್ದಾರೆ. 9 ರೂ.ಗೆ ಜಾಸ್ತಿ ಮಾಡುವುದಕ್ಕೆ ಅವರದೇನೂ ಅಭ್ಯಂತರ ಇರಲಿಲ್ಲ. ಕೆ.ಎಸ್.ಆರ್.ಟಿ.ಸಿ.ಯವರು 10-11 ಬಸ್ಸುಗಳನ್ನು ಮೊದಲು ಬಿಟ್ಟು, ನಂತರ ಅವುಗಳನ್ನೂ ನಿಲ್ಲಿಸಿಬಿಟ್ಟಿದ್ದಾರೆ. ಇವತ್ತು ಡೀಸೆಲ್ ರೇಟ್ ಸ್ವಲ್ಪ ಜಾಸ್ತಿ ಆಗಿದ್ದರೆ, ಇವತ್ತು 50 ಪ್ರಯಾಣಿಕರು ಒಂದು ಬಸ್ಸಿನಲ್ಲಿ ಪ್ರಯಾಣ ಮಾಡಿದರೂ ಸಹ 3 ರೂ. ಬೆಲೆ ಜಾಸ್ತಿಯಾದರೆ, ಬಸ್ಸಿಗೆ 150 ರೂ. ಜಾಸ್ತಿ ಆಗುತ್ತದೆ. ನಾವು 7.50 ರೂ. ಇರುವ ಬಸ್ಸಿನ ದರವನ್ನು 9 ರೂ.ಗೆ ಒಪ್ಪಿಕೊಂಡಿದ್ದರೂ, ಅದನ್ನು ಜಾರಿಗೆ ತರುವುದಕ್ಕೆ ಏನು ದಾಢಿ ಇದೆ? ಕೆ.ಎಸ್.ಆರ್.ಟಿ.ಸಿ ಬಸ್ಸುಗಳನ್ನು ಕೂಡ ನಿಲ್ಲಿಸಿ ಬಿಟ್ಟಿದ್ದಾರೆ. ಖಾಸಗಿ ಬಸ್ಸುಗಳಿಗಿಂತ ಕೆ.ಎಸ್.ಆರ್.ಟಿ.ಸಿ ಯಲ್ಲಿ ದರ ಕಡಿಮೆ ಇದೆ. 7.50 ರೂ. ಇದ್ದುದ್ದನ್ನು 9 ರೂ. ಮಾಡಲಿಕ್ಕೆ ಒಪ್ಪಿಕೊಂಡರೂ ಹಾಗೆ ಮಾಡದೇ 11 ರೂ.ಗೆ ಏರಿಸಿದ್ದಕ್ಕಾಗಿ ಜನ ಅದನ್ನು ಪ್ರತಿಭಟನೆ ಮಾಡುತ್ತಿದ್ದಾರೆ. ಆದರಿಂದಾಗಿ ಖಾಸಗಿ ಬಸ್ಸುಗಳು ತಮ್ಮ ಸಂಚಾರ ನಿಲ್ಲಿಸಿದವು. ಅದಕ್ಕೆ ಬದಲಾಗಿ 9-10 ಕೆ.ಎಸ್.ಆರ್.ಟಿ.ಸಿ ಬಸ್ಸುಗಳನ್ನು ಬಿಟ್ಟರು. ಈಗ ಆ ಬಸ್ಸುಗಳ ಓಡಾಟವೂ ನಿಂತಿದೆ. ಹೀಗಾದರೆ ಮಾನ್ಯ ಶಾಸಕರು ಓಡಾಡುವುದು ಹೇಗೆ? ತಕ್ಷಣ ಖಾಸಗಿ ಬಸ್ಸುಗಳವರ ಜೊತೆಗೆ ಮಾತನಾಡಿ ಬಸ್ಸುಗಳ ಸಂಚಾರ ಸುಗಮವಾಗುವಂತಹ ವ್ಯವಸ್ಥೆಯನ್ನು ಮಾಡಿ. ಸರ್ಕಾರ ಮಧ್ಯ ಪ್ರವೇಶ ಮಾಡಿ ಈಗಿರುವ ಬಸ್ಸು ದರವನ್ನು 7 ರೂ.ನಿಂದ ಒಂದು ಅಥವಾ ಒಂದೂವರೆ ರೂಪಾಯಿ ಮಾತ್ರ ಜಾಸ್ತಿಯಾಗುವಂತೆ ಮಾಡಿ.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು):- ಮಾನ್ಯ ಉಪಾಧ್ಯಕ್ಷರೇ, ನಾನು ಈ ವಿಷಯವನ್ನು ಈ ಕೂಡಲೇ ಮಾನ್ಯ ಸಾರಿಗೆ ಸಚಿವರಿಗೆ ತಿಳಿಸುತ್ತೇನೆ. ಈ ಸಮಸ್ಯೆಯನ್ನು ಆದಷ್ಟು ಜಾಗ್ರತೆ ಬಗೆಹರಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ:- ಮಾನ್ಯ ಉಪಾಧ್ಯಕ್ಷರೇ, ನಿನ್ನೆ ನಾನು ಮಾನ್ಯ ಸಾರಿಗೆ ಮಂತ್ರಿಗಳನ್ನು ಭೇಟಿಯಾಗಿ ಮಾತುಕತೆ ನಡೆಸಿದೆ, ಆದರೆ ಆದರಿಂದ ಇದುವರೆವಿಗೂ ಏನೂ ಪ್ರಯೋಜನವಾಗಿಲ್ಲ. ಈಗಲೂ ಕೂಡ ಮಾತುಕತೆ ನಡೆಸುತ್ತೇವೆ ಅಂತ ಕರೆದಿದ್ದಾರೆ, ಏನೂ ಪ್ರಯೋಜನ ಆಗಿಲ್ಲ. ದಯಮಾಡಿ ಈಗಿಂದೀಗಲೇ ಅಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳನ್ನು ಓಡಿಸಬೇಕು ಎಂದು ಸದನದಲ್ಲೇ ಆದೇಶ ಕೊಡಿ, ಆಮೇಲೆ ನೀವು ಮಾತುಕತೆಗೆ ಕರೆಸಿ, ನಾವು ಬರುತ್ತೇವೆ, ಮಾತುಕತೆ ಆಡೋಣ.

ಶ್ರೀ ವಾಟಾಳ್ ನಾಗರಾಜ್:- ನಾಲ್ಕೂ ದಿವಸದಿಂದ ಬಸ್ಸುಗಳಿಲ್ಲ ಎಂದು ಹೇಳುತ್ತಿದ್ದಾರೆ, ಈಗ ಹೇಳಿ. . .

(ಗೊಂದಲ)

ಶ್ರೀ ಸಿ. ಬೈರೇಗೌಡ:- ಸಾರಿಗೆ ಖಾತೆಯನ್ನು ನೋಡಿಕೊಳ್ಳತಕ್ಕಂತಹ ಮಂತ್ರಿಗಳು ಬೇರೆಯವರಿದ್ದಾರೆ. ಅದು ನೇರವಾಗಿ ಅವರಿಗೆ ಸಂಬಂಧಪಡುತ್ತದೆ. ನಾನು ಅವರ ಗಮನಕ್ಕೆ ತರುತ್ತೇನೆ. ಈ ಬಗ್ಗೆ ಅವರಿಂದ ಒಂದು ಹೇಳಿಕೆಯನ್ನೂ ಮಾಡಿಸೋಣ.

(ಗೊಂದಲ)

ಉಪಾಧ್ಯಕ್ಷರು:- ಮಾನ್ಯ ಸದಸ್ಯರು ಮಾನ್ಯ ಮಂತ್ರಿಗಳು ಹೇಳುವ ಉತ್ತರವನ್ನು ಕೇಳಲಿಕ್ಕೆ ಸಮಾಧಾನ ಇಲ್ಲ ಎಂದರೆ ಹೇಗೆ? ತಾವು ಅವರ ಉತ್ತರವನ್ನು ಮೊದಲು ಕೇಳಬೇಕು.

(ಗೊಂದಲ)

ಡಾ: ಎಂ. ಶಂಕರ್ ನಾಯಕ್:- ಮಾನ್ಯ ಉಪಾಧ್ಯಕ್ಷರೇ, ಈಗ ಮಾನ್ಯ ಸದಸ್ಯರಾದ ಬಾಲಕೃಷ್ಣರವರು ಮಾಗಡಿ ತಾಲ್ಲೂಕಿನ ಬಗ್ಗೆ ಏನು ಮಾತನಾಡುತ್ತಿದ್ದಾರೆ, ಅದರ ಕೆಲವು ಭಾಗ ನನ್ನ ಕ್ಷೇತ್ರಕ್ಕೂ ಬರುತ್ತದೆ. ಅಲ್ಲಿ ಏನಾಗಿದೆ ಅಂದರೆ, ಕೆ.ಎಸ್.ಆರ್.ಟಿ.ಸಿ. ಬಸ್ಸು ಇಲ್ಲ. ಅಲ್ಲಿ ಓಡಾಡತಕ್ಕ ಬಸ್ಸುಗಳೆಲ್ಲಾ ಪ್ರೈವೇಟ್ ಬಸ್ಸುಗಳೇ. ಅವರು ಏನು ಹೇಳುತ್ತಾರೆ, ಕೆ.ಎಸ್.ಆರ್.ಟಿ.ಸಿ. ಬಸ್ಸುಗಳೂ ಸಹ ನಿಂತಿವೆ ಎಂದು, ಅದು ನಿಜವಲ್ಲ. ಅಲ್ಲಿ ಯಾವ ಕೆ.ಎಸ್.ಆರ್.ಟಿ.ಸಿ. ಬಸ್ಸೇ ಓಡಾಡುತ್ತಿಲ್ಲ. ಅಕಸ್ಮಾತ್ ಓಡಾಡುತ್ತಿದ್ದರೆ ಅವುಗಳು ಯಾವುವೂ ನಿಂತಿಲ್ಲ. ಈಗ ಓಡಾಡುತ್ತಿರುವುದು ಪ್ರೈವೇಟ್ ಬಸ್ಸುಗಳು. ಪ್ರೈವೇಟ್ ಬಸ್ಸುಗಳವರು ಹೋದ ಸಾರಿ ಡೀಸಲ್ ರೇಟ್ ಮತ್ತು ಟೈರ್ ರೇಟ್ ಜಾಸ್ತಿಯಾಗಿದ್ದರಿಂದ ಅವರು ಜಾಸ್ತಿ ಮಾಡಬೇಕೆಂದು ಆಗಿನಿಂದ ಹೋರಾಟ ಮಾಡುತ್ತಿದ್ದಾರೆ. ಜನರ ಪ್ರತಿಭಟನೆಯಿಂದ ನಿಲ್ಲಿಸಿದ್ದರು. ಮಾನ್ಯ ಶಾಸಕರು ಹೇಳಿದ ಹಾಗೆ ಏಳುವರೆಯಿಂದ ಹನ್ನೊಂದು ರೂಪಾಯಿ ಮಾಡಿದ್ದಾರೆ ಎಂದು ಗೊತ್ತಾಗಿದೆ. ಪ್ರೈವೇಟ್ ಮ್ಯಾನೇಜ್‌ಮೆಂಟ್‌ನವರನ್ನು ಕರೆಯಿಸಿ ನಮ್ಮ ಸಾರಿಗೆ

ಸಚಿವರ ಸಮ್ಮುಖದಲ್ಲಿ ಅದನ್ನು ತೀರ್ಮಾನ ಮಾಡಿ, ಅವರು ಹೇಳಿದ ಹಾಗೆ ಏಳುವರೆಯಿಂದ ಒಂಭತ್ತು ರೂಪಾಯಿಗೆ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಹೆಚ್..ಸಿ. ಬಾಲಕೃಷ್ಣ:- ನಿನ್ನೆ ಮಂಗಳವಾರ ಎಂಟು ಬಸ್‌ಗಳನ್ನು ಮಾಗಡಿಯಿಂದ ಬೆಂಗಳೂರಿಗೆ ಬಿಟ್ಟಿದ್ದರು. ಅದನ್ನು ಏಕಾಏಕಿ ನಿಲ್ಲಿಸಿದ್ದಾರೆ. ಕೆ.ಎಸ್.ಆರ್.ಟಿ.ಸಿ. ಬಸ್‌ಗಳನ್ನು ನೀವು ಬಿಡಿ ಪ್ರೈವೇಟ್ ಬಸ್‌ನವರು ಮಾತುಕತೆಗೆ ಬರುವುದಕ್ಕೆ ಸಿದ್ದವಿಲ್ಲ. ಈ ಪ್ರೈವೇಟ್ ಬಸ್‌ನವರು ರೇಟ್ ರೈಸ್ ಮಾಡುವುದಕ್ಕೆ ಮಾತುಕತೆಗೆ ಬರುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಅವರು ಸಚಿವರ ಹತ್ತಿರ ಮಾತನಾಡಿದ ಮೇಲೆ ಪ್ರೈವೇಟ್ ಬಸ್‌ನವರಿಗೆ ಕರೆದು ಬುದ್ಧಿ ಹೇಳೋಣ. ಬಿಗಿ ಮಾಡೋಣ. ಕೆ.ಎಸ್.ಆರ್.ಟಿ.ಸಿ. ಯವರು ಬಿಟ್ಟಿದ್ದರು ಅದನ್ನು ನಿಲ್ಲಿಸಿದ್ದಾರೆ.

ಶ್ರೀ ಬಿ.ಎನ್. ಬಚ್ಚೇಗೌಡ:- ಮಾನ್ಯ ಉಪಾಧ್ಯಕ್ಷರೇ, ಆ ರೂಟ್ ಏನಿದೆ ಅದು ಮನಾಪಲಿ ರೂಟ್ ಅಲ್ಲ. ಖಾಸಗೀಕರಣ ಆಗಿರುವಂಥದ್ದು. ಮನಾಪಲಿ ರೂಟ್‌ನಲ್ಲಿ ಮಾತ್ರ ಕೆ.ಎಸ್.ಆರ್.ಟಿ.ಸಿ. ಆಪರೇಟ್ ಮಾಡತಕ್ಕಂಥದ್ದು. ಈ ಹಿಂದೆ ಖಾಸಗಿ ಬಸ್ಸುಗಳು ಮಾನ್ಯ ಶಂಕರ ನಾಯಕರು ಹೇಳಿದ ಹಾಗೆ ಅದು ಆಗುತ್ತಿತ್ತು. ಅದಕ್ಕೋಸ್ಕರ ಅಧಿಕಾರಿಗಳ ಹತ್ತಿರ ಮಾತನಾಡಬೇಕಾಗುತ್ತದೆ. ರೋಡ್ ಟ್ರಾನ್ಸ್‌ಪೋರ್ಟ್ ಅಥಾರಿಟಿಯವರನ್ನು ನಾವು ಕರೆಸಬೇಕಾಗುತ್ತದೆ. ಆರ್.ಟಿ.ಎ. ಮತ್ತು ಆರ್.ಟಿ.ಒ. ಗಳ ಜೊತೆ ಕೂತು ಮಾತನಾಡಿ ವ್ಯವಸ್ಥೆ ಮಾಡಬೇಕಾಗುತ್ತದೆ. ಅದನ್ನು ಬೈರೇಗೌಡರಾಗಲಿ, ನಾವಾಗಲಿ ಬಸ್ ಹಾಕಿಕೊಡುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ:- ನಾಲ್ಕು ದಿವಸಗಳ ಸಮಸ್ಯೆ, ನಾಲ್ಕು ದಿವಸಗಳಲ್ಲಿ ಕರೆದು ಬಗೆಹರಿಸಬಹುದಾಗಿತ್ತು. ಮಾನ್ಯ ಸಚಿವರು ಅಲ್ಲಿ ಹೋಗಿದ್ದರೆ ಬಗೆಹರಿಯುತ್ತಿತ್ತು. ಪ್ರಶ್ನೆ ಕೇಳುತ್ತಿದ್ದೇನೆ, ನೀವು ಹೇಳುತ್ತಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಆಲ್ಟರ್ನೇಟಿವ್ ವ್ಯವಸ್ಥೆ ಮಾಡಿ ಎಂದು ಹೇಳಿದ್ದರು.

ಉಪಾಧ್ಯಕ್ಷರು:- ಸಂಬಂಧಿಸಿದ ಮಂತ್ರಿಗಳನ್ನೂ ಅಧಿಕಾರಿಗಳನ್ನೂ ಕರೆಸಿ ಮಾತನಾಡಿ ಪರಿಹಾರ ಕಂಡು ಹಿಡಿಯುತ್ತೇವೆಂದು ಹೇಳಿದ್ದಾರೆ. ಶೂನ್ಯ ವೇಳೆಯಲ್ಲಿ ಉತ್ತರ ಏನು ಹೇಳುತ್ತಾರೆ ತಾವೇ ಹೇಳಿ. ಯಾವ ರೀತಿ ಮಾಡುವುದು ಹೇಳಿ.

(ಗೊಂದಲ)

ಶ್ರೀಮತಿ ಪ್ರಮೀಳಾ ನೇಸರ್ಗಿ:- ಉಪ ಸಭಾಧ್ಯಕ್ಷರೇ, ಸ್ಕೂಲ್ ಕಾಲೇಜಿಗೆ ಮಕ್ಕಳು ಬರುವುದಕ್ಕಾಗುತ್ತಿಲ್ಲ ಬಸ್ ನಿಂತು ಹೋದರೆ ಹೇಗೆ, ತಾವು ಯೋಚನೆ ಮಾಡಬೇಕು. ತಕ್ಷಣ ಅವರು ಹೇಳಿ ಆಲ್ಟರ್ನೇಟಿವ್ ಅರೆಂಜ್‌ಮೆಂಟ್ ಮಾಡುತ್ತಾರಾ, ಸರ್ಕಾರದವರು ಬಿಟ್ಟಿದ್ದು ಏಕೆ ಕ್ಯಾನ್ಸಲ್

ಮಾಡಿದರು? ತಾವು ತಕ್ಷಣ ಆಲ್ಟರ್ನೇಟಿವ್ ಅರೇಂಜ್‌ಮೆಂಟ್ ಮಾಡಬೇಕು. ಪ್ರೈವೇಟ್ ಮ್ಯಾನೇಜ್‌ಮೆಂಟ್ ಜೊತೆ ತೀರ್ಮಾನವಾಗುವವರೆಗೆ ಜನ ಹೇಗೆ ಓಡಾಡಬೇಕು? ಓಡುತ್ತಿದ್ದ ಸಾರಿಗೆ ಸಂಸ್ಥೆ ಬಸ್ಸುಗಳನ್ನು ಏಕೆ ನಿಲ್ಲಿಸಿದಿರಿ?

ಶ್ರೀ ಹೆಚ್.ಸಿ. ಬಾಲಕೃಷ್ಣ:- ಈಗ ಸದನದಲ್ಲಿ ಮಂತ್ರಿಗಳು ತಕ್ಷಣ ಹೇಳಬೇಕು, ಮಾತುಕತೆ ಆದ ನಂತರ ಕೆ.ಎಸ್.ಆರ್.ಟಿ.ಸಿ. ಆದರೂ ಬಿಡಿ, ಖಾಸಗಿ ಬಸ್ಸ್ ಆದರೂ ಬಿಡಿ. . . .

ಉಪಾಧ್ಯಕ್ಷರು:- ಯಡಿಯೂರಪ್ಪನವರೇ ತಾವು ಎಲ್ಲಾ ಹೇಳಬೇಕು. ತಾವು ಹೇಳದಿದ್ದರೆ ಹೇಗೆ. . .?

(ಈ ಹಂತದಲ್ಲಿ ಶ್ರೀ ಬಾಲಕೃಷ್ಣರವರು ಬಾವಿಯಲ್ಲಿ ಧರಣಿ ಪ್ರಾರಂಭಿಸಿದರು)

ಶ್ರೀ ಸಿದ್ಧರಾಮಯ್ಯ:- ಶೂನ್ಯ ವೇಳೆಯಲ್ಲಿ ಅವರು ಪ್ರಸ್ತಾಪ ಮಾಡಿದ್ದಾರೆ. ಮಾಡಿದ ತಕ್ಷಣ ಈಗಲೇ ಉತ್ತರ ಕೊಡಬೇಕು, ಈ ಗಳಿಗೆಯಲ್ಲಿ ಕೊಡಬೇಕು. . .

ಉಪಾಧ್ಯಕ್ಷರು:- ತಾವು ಎರಡು ನಿಮಿಷ ಎಲ್ಲರೂ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಿ ಹೊಸಬರು ಇದ್ದಾರೆಂದು ಹೇಳಿದಿರಿ. ಅವರಿಗೆ ಕೊಟ್ಟ ಅವಕಾಶವನ್ನು ದುರುಪಯೋಗ ಮಾಡಿಕೊಂಡರೆ ಹೇಗೆ? ತಾವು ದಯಮಾಡಿ ವಿಚಾರ ಮಾಡಬೇಕು. ಎರಡೆರಡು ನಿಮಿಷ ಎಂದು ಹೇಳಿ ಅರ್ಧ ಗಂಟೆ ಮಾತನಾಡಿದರೆ ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾಗಡಿಯಿಂದ ಬೆಂಗಳೂರಿಗೆ ಪ್ರೈವೇಟ್ ಬಸ್ ಬಿಡುತ್ತಿದ್ದರು. ಏಳುವರೆ ಇತ್ತು ಆದನ್ನು ಹನ್ನೊಂದು ರೂಪಾಯಿ ಮಾಡಿದ್ದಾರೆ. ಪ್ರೊಟೆಸ್ಟ್ ಮಾಡಿದ್ದಕ್ಕೆ ನಿಲ್ಲಿಸಿದ್ದಾರೆ. ಅವರು ಕೆ.ಎಸ್.ಆರ್.ಟಿ.ಸಿ. ಮತ್ತು ನಮ್ಮ ಸಿಂಧ್ಯರವರಿಗೂ ಭೇಟಿ ಮಾಡಿದ್ದಾರೆ. ಆಲ್ಟರ್ನೇಟಿವ್ ಎಂಟು ಬಸ್‌ಗಳನ್ನು ಬಿಟ್ಟಿದ್ದರು, ಕೆ.ಎಸ್.ಆರ್.ಟಿ.ಸಿ. ರೂಟ್ ಅಲ್ಲದಿದ್ದರೂ ಬಸ್ಸನ್ನು ಬಿಟ್ಟಿದ್ದರು. ಈಗ ಅದು ನಿಂತಿದೆ; ಪ್ರಯಾಣಿಕರಿಗೆ ತೊಂದರೆಯಾಗಿದೆ. ಶಾಸಕರು ಓಡಾಡುವುದಕ್ಕಾಗುವುದಿಲ್ಲ. ನಾವು ನಿಮ್ಮನ್ನು ಏನು ಕೇಳುತ್ತಿದ್ದೇವೆ? ಆವತ್ತಿನಿಂದ ಹಿಂದೆ ಕೆ.ಎಸ್.ಆರ್.ಟಿ.ಸಿ.ನ ಬಸ್‌ನ ಟಿಂಪರವರಿ ಅರೇಂಜ್‌ಮೆಂಟ್ ಏನು ಮಾಡಿದ್ದರು ಅದನ್ನಾದರೂ ಮತ್ತೆ ಮಾಡಿ, ಆಮೇಲೆ ಖಾಸಗಿ ಮಾಲೀಕರ ಜೊತೆ ಮಾತನಾಡಿ ಸರಿಪಡಿಸಿ ಎಂದು ಹೇಳಿದ್ದಾರೆ. ಅದನ್ನು ಮಾಡುವುದಕ್ಕೆ ಏನು ತೊಂದರೆ ಅದನ್ನು ಮಾಡಿದರೆ ಅವರು ಒಪ್ಪುತ್ತಾರೆ.

ಉಪಾಧ್ಯಕ್ಷರು:- ಅವರು ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಸಿದ್ಧರಾಮಯ್ಯ:- ಮಾನ್ಯ ಸಾರಿಗೆ ಸಚಿವರು ಮೇಲ್ಮನೆಯಲ್ಲಿ ಇದ್ದಾರೆ. ಅವರ ಇಲಾಖೆ ಬೇಡಿಕೆ ಮೇಲೆ ಉತ್ತರ ಕೊಡುವುದಕ್ಕೆ ಈಗ ಅವರು ಬರುತ್ತಾರೆ. ಇವತ್ತು ಹೇಳಿದಂತಹ ವಿಚಾರವನ್ನು ಕೂಡ ಅವರ ಜೊತೆ ಪ್ರಸ್ತಾಪ ಮಾಡಿ ಅದಕ್ಕೆ ಪರಿಹಾರ ಕಂಡುಕೊಳ್ಳತಕ್ಕಂತಹ ಪ್ರಯತ್ನ

ಮಾಡೋಣ. ಕೂಗಾಟದಿಂದ ಪರಿಹಾರ ಆಗುವುದು ಎಂದರೆ ಅವರು ಕೂಗಾಡಲಿ, ಇವರೂ ಕೂಗಾಡಲಿ ಅದರಿಂದ ಪರಿಹಾರ ಆಗುವುದಿಲ್ಲ.

ಉಪಾಧ್ಯಕ್ಷರು:- ಬಿ.ಟಿ. ಲಲಿತಾನಾಯಕ್‌ರವರೇ, ಎರಡು ನಿಮಿಷದಲ್ಲಿ ತಾವು ಪ್ರಸ್ತಾಪ ಮಾಡಬೇಕು. ಉದ್ದುದ್ದ ಭಾಷಣ ಮಾಡಬಾರದು.

(ಉ) ತೋಟಗಾರಿಕೆ ಇಲಾಖೆಗೆ ಸೇರಿದಂಥ ಬಾಲಭವನ ಕುರಿತು.

+ ಶ್ರೀಮತಿ ಬಿ.ಟಿ. ಲಲಿತಾನಾಯಕ್ (ದೇವದುರ್ಗ):- ಸನ್ಮಾನ್ಯ ಉಪಾಧ್ಯಕ್ಷರೇ, ತೋಟಗಾರಿಕೆ ಇಲಾಖೆಗೆ ಸೇರಿದಂತಹ ಕಬ್ಬನ್ ಉದ್ಯಾನವನದಲ್ಲಿ ಸುಮಾರು 12.5 ಎಕರೆ ವಿಸ್ತೀರ್ಣದಲ್ಲಿ ಮಕ್ಕಳ ಮನೋರಂಜನೆಗಾಗಿ ನಡೆಸುತ್ತಿರುವಂಥ ಬಾಲಭವನ ಇವತ್ತು ಯಾವ ಸ್ಥಿತಿಗೆ ಮುಟ್ಟಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಇದಕ್ಕೆ ಕಾರಣ ಆಗಿರುವಂಥದ್ದು ಏನೆಂದರೆ, ಈ ಫನ್ ವರ್ಲ್ಡ್ ಅನ್ನುವಂಥ ಒಂದು ಸಂಸ್ಥೆ ಇವತ್ತು ಅಲ್ಲಿ ಹುಟ್ಟಿಕೊಂಡಿದೆ. ಅದರಿಂದ ಇವತ್ತು ನಮ್ಮ ಬಾಲಭವನಕ್ಕೆ ಕೋಟ್ಯಾಂತರ ರೂಪಾಯಿಗಳು ನಷ್ಟವಾಗುತ್ತಿದೆ. ನನ್ನ ಬೇಡಿಕೆ ಏನೆಂದರೆ ಮಕ್ಕಳಿಗೋಸ್ಕರ ಇಷ್ಟು ಹಚ್ಚ ಹಸಿರಿನ ನಡುವೆ ಮಕ್ಕಳಿಗೆ ನಾನಾ ರೀತಿಯ ಆಟಗಳಿಗೆ ಉಯ್ಯಾಲೆ, ಜಾರುವ ಬಂಡೆ, ಫ್ರೀ ಆಗಿದೆ. ಮೆರಿಗೋ ರೌಂಡ್, ಜಾಯಿಂಟ್ ವ್ಹೀಲ್ ಇಂತಹ ಬಹಳಷ್ಟು ಆಟಗಳು ಮಕ್ಕಳಿಗೆ ಅಲ್ಲಿ ಲಭ್ಯವಿದೆ. ಇಷ್ಟೆಲ್ಲಾ ಇದ್ದರೂ ಕೂಡ ನಾವು ಅದಕ್ಕೆ ಇಟ್ಟಿರುವಂತಹ ಫೀಸ್ ಎರಡು ರೂಪಾಯಿಯಿಂದ ಐದು ರೂಪಾಯಿ ಅಷ್ಟೆ. ಇನ್ನು ಒಳಗಡೆ ಹೋಗುವುದಕ್ಕೆ ಯಾವುದೇ ಶುಲ್ಕ ಇಲ್ಲ. ಇದರ ಜೊತೆಗೆ ಒಂದು ದೋಣಿ ವಿಹಾರ ಇದೆ, ಪುಟಾಣಿ ರೈಲ್ ಇತ್ತು. ಅದು ಸ್ವಲ್ಪ ಸೀಟ್ಸ್ ಹರಿದು ಛಾವಣಿ ಕಿತ್ತಿರುವುದರಿಂದ ಅದನ್ನು ಮೈಸೂರಿಗೆ ನವೀಕರಣಕ್ಕೋಸ್ಕರ ಕೊಟ್ಟಿದ್ದೇವೆ. ಇಷ್ಟೆಲ್ಲಾ ಬರುತ್ತದೆ, ಇಷ್ಟೆಲ್ಲಾ ಇದ್ದು ಕೂಡ ಈಗ ನಗರದಲ್ಲಿ ಫನ್ ವರ್ಲ್ಡ್ ಅಂದರೆ ಮೋಜಿನ ಜಗತ್ತು ಎನ್ನುವಂಥದ್ದು ಕಳೆದ ವರ್ಷ ಇದನ್ನು ಪ್ರಾರಂಭ ಮಾಡಿದ್ದಾರೆ. ಇದು ಬಹುಶಃ ಮೈಸೂರು ಮಹಾರಾಜರಿಗೆ ಸಂಬಂಧಪಟ್ಟಂತಹ ಜಾಗ ಎಂದು ಹೇಳಿದರು. ಆದರೆ ಇದಕ್ಕೆ ಕೆ.ಇ.ಬಿ. ಮತ್ತು ನಮ್ಮ ಪೋಲೀಸ್ ಇಲಾಖೆ, ನಗರ ಪಾಲಿಕೆ ಇವು ಮೂರು ಕೂಡ ಅನುಮತಿ ಕೊಟ್ಟಿವೆ. ಅನುಮತಿ ಕೊಟ್ಟಿರುವುದರಿಂದ ಅವರು ಸರ್ಕಾರಕ್ಕೆ 82,000 ರೂಪಾಯಿ 11 ತಿಂಗಳಿಗೆ ಕೊಡುತ್ತಾರೆ. ಅದೇ ನಮ್ಮ ಬಾಲಭವನಕ್ಕೆ ಕೊಟ್ಟರೆ, ನಾವು ಒಂದು ಲಕ್ಷ ರೂಪಾಯಿ ಕಟ್ಟಬಲ್ಲೆವು. ಅಷ್ಟರ ಮಟ್ಟಿಗೆ ನಡೆಯತಕ್ಕಂತಹ, ಸರ್ಕಾರಕ್ಕೆ ಸಂಬಂಧಪಟ್ಟಂತಹ ಬಾಲಭವನಕ್ಕೆ ಕೊಡದೆ, ಅದನ್ನು ಹಿಂದಕ್ಕೆ ತಳ್ಳಿ, ಅದಕ್ಕೆ ಮೋಸ ಆಗುವ ರೀತಿಯಲ್ಲಿ ಅಲ್ಲಿ ಕೊಟ್ಟಿರುವುದು ಸರಿಯಲ್ಲ. ಈ ಮೋಜಿನ ಜಗತ್ತು ಏನಿದೆ ಅದಕ್ಕೆ ಕೊಟ್ಟಿರುವಂತಹ ಲೈಸನ್ಸ್‌ನ್ನು ದಯವಿಟ್ಟು ರದ್ದು ಪಡಿಸುವುದು ಒಳ್ಳೆಯದು, ಅದಕ್ಕೆ ಯಾರು ಆ ಜಮೀನನ್ನು ಕೊಟ್ಟಿದ್ದಾರೆ ಅವರ ಮನವೊಲಿಸಿ ಅದನ್ನು ರದ್ದುಪಡಿಸಿ ಬಾಲಭವನಕ್ಕೆ ಕೊಡಿಸಿದರೆ ಅಲ್ಲಿ ಏನು ಸಹಕಾರ ಸೌಲಭ್ಯಗಳನ್ನು ಕೊಡುತ್ತಿರೋ ಅದನ್ನು ಇಲ್ಲಿಗೂ ಕೊಡಬಹುದು. ಏಕೆಂದರೆ ಒಬ್ಬ ಪತಿ ಪತ್ನಿ ಇಬ್ಬರು ಮಕ್ಕಳು ಅಷ್ಟು ಜನ ನಮ್ಮ ಬಾಲಭವನಕ್ಕೆ ಬಂದರೆ ಎಲ್ಲಾ ಆಟಗಳನ್ನು ಆಡಲಿಕ್ಕೆ 100